


# ಇದು ಫ್ಲವರ್ ಅಲ್ಲ ಫೈರ್!

ಬೇರೆ ಭಾಷೆಯ ಸಿನಿಮಾಗಳು ಕನ್ನಡದ್ದೇ ಎನ್ನವಷ್ಟು ವೃತ್ತಿಪರವಾಗಿ ಡಬ್ ಆಗಿ ಮನೆಮನೆಗಳಲ್ಲಿ ಮೊಳಗುತ್ತಿವೆ. ಅನ್ಯ ಶರೀರಕ್ಕೆ ಕನ್ನಡದ ಶಾರೀರ ತೊಡಿಸಿ ನಡೆಸುತ್ತಿರುವ ಈ ಕುಣಿತದ ಪರಿಣಾಮಗಳೇನಾಗಬಹುದು?

■ ಪದ್ಮನಾಭ ಭಟ್

ಮನೆಯಲ್ಲಿ ಅಮ್ಮ, ಮಗ ಒಟಿಟಿಯಲ್ಲಿ ಒಂದು ಸಿನಿಮಾ ನೋಡುತ್ತ ಕೂತಿದ್ದಾರೆ. ಆ ಸಿನಿಮಾ ನಾಯಕನನ್ನು ನೋಡಿದ ಅಮ್ಮ ಕರುಣೆಯಿಂದ, ‘ನೋಡೋ, ಈ ಹುಡುಗ ಎಷ್ಟು ಚೆನ್ನಾಗಿ ಆ್ಯಕ್ಟ್ ಮಾಡ್ತಾನೆ. ಪಾಪ ಇವ್ರೆಲ್ಲ ಎಷ್ಟು ವರ್ಷದಿಂದ ಕನ್ನಡ ಚಿತ್ರರಂಗದಲ್ಲಿ ಇದಾರೋ, ಇದುವರೆಗೆ ನೋಡೇ ಇರ್ಲಿಲ್ಲ’. ಮಗ ತುಸು ಆಘಾತದಿಂದಲೇ ಅಮ್ಮನ ಮುಖ ನೋಡಿದ. ಅವರ ಮುಖದಲ್ಲಿ ವ್ಯಂಗ್ಯವಾಗಲಿ, ನಾಟಕೀಯತೆಯಾಗಲಿ ಇರಲಿಲ್ಲ.

‘ಅಮ್ಮಾ, ಅವ್ನು ಕನ್ನಡದ ನಟ ಅಲ್ಲ, ತೆಲುಗಿನ ಸೂಪರ್‌ಸ್ಟಾರ್ ಅಲ್ಲು ಅರ್ಜುನ್. ನಾವು ನೋಡ್ತಿರೋ ‘ಪುಷ್ಪ’ ಸಿನಿಮಾನೂ ತೆಲುಗಿಂದೇ. ಕನ್ನಡದ ಡಬ್ ವರ್ಷನ್ ಅಷ್ಟೆ’

ಈಗ ಆಘಾತಗೊಳ್ಳುವ ಸರದಿ ಅಮ್ಮನದು.

***

ಇದೇನೂ ಕಾಲ್ಪನಿಕ ಘಟನೆಯಲ್ಲ. ನಿಜವಾಗಲೂ ನಡೆದಿದ್ದು ಮತ್ತು ಯಾರ ಮನೆಯಲ್ಲಾದರೂ ನಡೆಯಬಹುದಾದಂಥದ್ದು. ವಿಪರ್ಯಾಸವೆಂದರೆ ಈ ಘಟನೆ ನಡೆದಿದ್ದು ಕನ್ನಡದ ಹೊಸ ತಲೆಮಾರಿನ ನಿರ್ದೇಶಕರೊಬ್ಬರ ಮನೆಯಲ್ಲಿ!

ಡಬ್ಬಿಂಗ್ ಚಳವಳಿ ಹಳ್ಳ ಹಿಡಿದು, ಅದರ ಶವಪೆಟ್ಟಿಗೆಯ ಮೇಲೆ ನ್ಯಾಯಾಲಯ ತನ್ನ ತೀರ್ಪಿನ ಕೊನೆಯ ಮೊಳೆಯನ್ನೂ ಹೊಡೆದು ಹಲವು ವರ್ಷಗಳೇ ಕಳೆದಿವೆ. ಚಳವಳಿಯ ಮೂಲಕ ಡಬ್ಬಿಂಗ್ ತಡೆಯಲು ಸೋತವರು, ‘ಡಬ್ಬಿಂಗ್ ಸಿನಿಮಾ ಬಂದ್ರೂ ಯಾರು ನೋಡ್ತಾರೆ ಬಿಡಿ, ಮೂರು ದಿನ ಓಡಲ್ಲ, ಮಣ್ಣು ಮುಕ್ಕಿ ಹೋಗತ್ತೆ’ ಸಮಾಧಾನ ತಂದುಕೊಂಡಿದ್ದರು. ಬಹುಶಃ ಈ ಮಾತನ್ನು ಹೇಳುವಾಗ ಅವರ ಮನಸಲ್ಲಿ ಇದ್ದಿದ್ದು, ಯಾವು ಯಾವುದೋ ಹಿಂದಿ ಚಾನಲ್ಲುಗಳಲ್ಲಿ ಅಚಾನಕ್ಕಾಗಿ ಬರುವ ದೊಡ್ಡಣ್ಣ, ಸಾಧುಕೋಕಿಲರ ಕೆಟ್ಟದಾಗಿ ಡಬ್ ಮಾಡಿದ ಹಿಂದಿ ಸಿನಿಮಾಗಳಿರಬೇಕು.

ಆದರೆ ಕಳೆದ ಕೆಲವು ವರ್ಷಗಳಲ್ಲಿ ಬೆಳ್ಳಿತೆರೆ ಹಲವು ಉಬ್ಬರಗಳನ್ನೂ, ಬರಗಾಲಗಳನ್ನೂ ಕಂಡಿದೆ. ಚಿತ್ರರಂಗದ ಚಹರೆ, ನಕ್ಷೆ ಎರಡೂ ಸಾಕಷ್ಟು ಬದಲಾಗಿದೆ. ಇತ್ತೀಚೆಗೆ ಬಿಡುಗಡೆಯಾದ ತೆಲುಗಿನ ‘ಪುಷ್ಪ’ ಸಿನಿಮಾ ಕನ್ನಡ ಅವತರಣಿಗೆ ನೋಡಿದರೆ ‘ಡಬ್ ಸಿನಿಮಾಗಳನ್ನು ಯಾರು ನೋಡ್ತಾರೆ ಬಿಡಿ’ ಎಂಬ ಉಡಾಫೆಯ ಮಾತುಗಳಿಗೆ ಸ್ಪಷ್ಟ ಉತ್ತರ ಸಿಗುತ್ತದೆ. ‘ಪುಷ್ಪ’ ಒಂದು ಪ್ರಾತಿನಿಧಿಕ ಉದಾಹರಣೆಯಷ್ಟೆ.

ಕೋಲಾರ ಭಾಗದ ಕನ್ನಡದ ಸೊಗಡನ್ನು ‘ಪುಷ್ಪ’ದಲ್ಲಿ ಬಳಸಿಕೊಂಡಷ್ಟು ಸಮರ್ಥವಾಗಿ ಕನ್ನಡದ್ದೇ ಇನ್ಯಾವ ಸಿನಿಮಾದಲ್ಲಿಯಾದರೂ ಸಂಪೂರ್ಣವಾಗಿ ಬಳಸಿಕೊಂಡಿದ್ದಾರಾ ಎಂಬುದನ್ನು ಮಸೂರದಲ್ಲಿ ಹುಡುಕಿ ನೋಡಬೇಕು.

‘ಪುಷ್ಪ’ದ ಕನ್ನಡ ಅವತರಣಿಕೆ ನಮ್ಮೆದುರು ಎರಡು ಮುಖ್ಯ ಪ್ರಶ್ನೆಗಳನ್ನು ಎತ್ತುತ್ತಿದೆ. ಈಗಾಗಲೇ ಪರಭಾಷಾ ಚಿತ್ರಗಳು ಅವರದ್ದೇ ಭಾಷೆಯಲ್ಲಿ ಬಂದಾಗಲೇ ಅದನ್ನು ಎದುರಿಸಲು ನಮ್ಮ ಚಿತ್ರರಂಗಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕೆ ಉದಾಹರಣೆಗಳಂತೂ ಹೇರಳ ದೊರಕುತ್ತವೆ. ಇನ್ನು ಅವು ಕನ್ನಡ ಚಿತ್ರಗಳಾಗಿ ಬಂದರೆ, ಡಬ್ಬಿಂಗ್ ಸಿನಿಮಾಗಳನ್ನು ಕನ್ನಡದ ಸಿನಿಮಾಗಳೆಂದು